**ದಿನಾಂಕ 16.10.2024 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಶ್ರೀ.ಎಲ್.ಎ. ವಕೀಲರಿಂದಃ-</u>**

4. ನಿಪಿ1 ರ ದಾಖಲೆ ಆಗುವ ಸಮಯದಲ್ಲಿ ನಾನು ಹಾಜರಿದ್ದೆನು. ನಿಪಿ1 ರ ಪ್ರಕಾರ 60 ದಿನಗಳ ಒಳಗಾಗಿ leave and license ಕರಾರು ಪತ್ರ ಆಗಬೇಕಾಗಿತ್ತು ಅಂದರೆ ಸರಿ. 60 ದಿನಗಳ ಒಳಗಾಗಿ ಸದರಿ ಕರಾರು ಪತ್ರ ಆಗದೇ ಹೋದಲ್ಲಿ ನಿಪಿ1 ರದ್ದಾಗುತ್ತದೆ ಎನ್ನುವ ಬಗ್ಗೆ ಅದರಲ್ಲಿ ಕರಾರು ಇದೆ ಅಂದರೆ ಸರಿ. ಕರಾರಿನಿ ಪ್ರಕಾರ ಈ 60 ದಿನಗಳ ಒಳಗಡೆ ನಮ್ಮಿಂದ leave and license ಕರಾರು ಪತ್ರದ ಕರುಡು ಪ್ರತಿಯನ್ನು ಮಾಡಿಕೊಟ್ಟಿದ್ದೆನು. ಸದರಿ ಕರುಡು ಪ್ರತಿಯನ್ನು ವಾದಿಗೆ ನೀಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

5. ದಿನಾಂಕ 25.12.2019 ರಂದು ದಾವಾ ಆಸ್ತಿಯನ್ನು ವಾದಿಗೆ ಹಸ್ತಾಂತರ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಅದನ್ನು ವಾದಿಗೆ ದಿನಾಂಕ 06.01.2020 ರಂದು ಹಸ್ತಾಂತರ ಮಾಡಲಾಗಿದೆ ಅಂದರೆ ಸರಿಯಲ್ಲ. ದಿನಾಂಕ 06.01.2020 ರಿಂದ 06.02.2020 ರವರೆಗೆ ಸದರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡುವ ಸಮಯ ಆಗಿರುತ್ತದೆ ಅಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸೂಕ್ತ ವ್ಯವಸ್ಥೆ ಮಾಡುವ ಮೊದಲು ಪ್ರತಿವಾದಿ ಕಂಪನಿಯಿಂದ ಮಂಜೂರಾತಿ ಬೇಕಾಗುತ್ತದೆ ಅಂದರೆ ಸಾಕ್ಷಿದಾರರು ಸದರಿ ದಿನಾಂಕ ಸರಿ ಇರುವುದಿಲ್ಲ ಅಂತ ಉತ್ತರಿಸುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟತೆ ನಿಗದಿಪಡಿಸಿದಂತ ಬಾಡಿಗೆ ದಿನಾಂಕ 06.02.2020 ರಿಂದ ಅನ್ವಯವಾಗುತ್ತದೆ ಅಂದರೆ ಸರಿಯಲ್ಲ.

6. ದಯಾನಂದ ಶೀಲವಂತ್ ಇವರ ಪರಿಚಯ ಇರುತ್ತದೆ. ಅವರು ಮೊದಲು ಪ್ರತಿವಾದಿ ಕಂಪನಿಯಲ್ಲಿ ಕೆಲಸ ಮಾಡುತ್ತಾ ಇದ್ದರು. ಸದರಿಯವರು ನನಗೆ ದಿನಾಂಕ 06.02.2020 ರಂದು ಬಾಡಿಗೆ ಸಂಬಂಧಪಟ್ಟಂತೆ ಇ-ಮೇಲ್ ಕಳುಹಿಸಿದ್ದರು ಅಂದರೆ ನನಗೆ ಸರಿಯಾಗಿ ನೆನಪಿಲ್ಲ. ಈಗ ಸಾಕ್ಷಿದಾರರಿಗೆ ದಿನಾಂಕ 06.02.2020 ರ ಇ-ಮೇಲ್

ಪ್ರತಿಯನ್ನು ತೋರಿಸಲಾಗಿ, ಅದನ್ನು ಸಾಕ್ಷಿದಾರರು ಒಪ್ಪಿಕೊಂಡಿರುತ್ತಾರೆ. ಅದನ್ನು **ನಿಪಿ19** ಎಂದು ಗುರುತಿಸಲಾಯಿತು. ದಿನಾಂಕ 06.02.2020 ರಂದು ದಯಾನಂದ ಮತ್ತು ನನಗೆ ವಾದಿಯವರು ಇ-ಮೇಲ್ ಕಳುಹಿಸಿದ್ದರು ಅಂದರೆ ನನಗೆ ಕಳುಹಿಸಿರುವುದಿಲ್ಲ ದ ಯಾನಂದರವರಿಗೆ ಕಳುಹಿಸಿದ್ದರು ಅಂತ ಉತ್ತರಿಸುತ್ತಾರೆ. ನಿಪಿ19 ರ ಇ-ಮೇಲ್ ನನಗೆ, ದಯಾನಂದ, ಶ್ರೀ ಲಕ್ಷ್ಮೀ ಮತ್ತು ಇತರರಿಗೆ ಹೋಗಿತ್ತು. ಸಾಕ್ಷಿ ಸ್ವ ಹೇಳಿಕೆ, ನನಗೆ ಅದನ್ನು ಕಳುಹಿಸಬಾರದಿತ್ತು ಆದರೂ ಕೂಡ ಕಳುಹಿಸಿದ್ದರು ಅಂತ ಉತ್ತರಿಸುತ್ತಾರೆ. ನಾನು ಈ ಬಗ್ಗೆ ಯಾವುದೇ ಪ್ರತ್ಯುತ್ತರ ವಾದಿಗೆ ನೀಡಿರುವುದಿಲ್ಲ. ನಿಪಿ19 ರಲ್ಲಿಯ ವಿಷಯ ಸರಿ ಇರುತ್ತದೆ.

7. ಈಗ ಸಾಕ್ಷಿದಾರರಿಗೆ ಒಂದು ಫೋಟೋ ಪ್ರತಿಯನ್ನು ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಅದನ್ನು **ನಿಪಿ20** ಎಂದು ಗುರುತಿಸಲಾಯಿತು. ನಿಪಿ19 ರ ಪ್ರಕಾರ ವಾದಿಯ ಅಂಗಡಿಯಲ್ಲಿ ದಿನಾಂಕ 06.02.2020 ರಿಂದ ವ್ಯವಹಾರ ಪ್ರಾರಂಭ ಮಾಡಿದ್ದರು ಅಂದರೆ ಸರಿ. ದಿನನಿತ್ಯದ ವ್ಯವಹಾರದ ಬಗ್ಗೆ ನಾವೇ ವಾದಿಗೆ ಪಿ.ಓ.ಎಸ್. (point of sale) ಕೊಟ್ಟಿದ್ದೆವು ಅಂದರೆ ಸರಿ. ಈ ಪ್ರಕಾರ ದಿನಾಂಕ 06.02.2020 ರಿಂದ ವಾದಿಯ ವ್ಯವಹಾರ ಪ್ರಾರಂಭ ಆಗಿತ್ತು ಅಂದರೆ ಸರಿಯಲ್ಲ. ವಾದಿ ಕೊಡಬೇಕಾದಂತಹ ನಿಗದಿತ ಬಾಡಿಗೆ ದಿನಾಂಕ 06.02.2020 ರಿಂದ ಪ್ರಾರಂಭ ಆಗುತ್ತದೆ ಅಂದರೆ ಸರಿ. ನನ್ನ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ ಇರುವ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಅಂದರೆ ಸರಿಯಲ್ಲ.

8. ಮಾರ್ಚ್ 2020 ರಿಂದ ಕರೋನಾಗೆ ಸಂಬಂಧಪಟ್ಟಂತೆ ನಿಯಮಾವಳಿಗಳು ಸರ್ಕಾರದಿಂದ ಜಾರಿ ಆಗಿದ್ದವು ಅಂದರೆ ಸರಿ. ನನ್ನ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ಮಾರ್ಚ್ 2020 ರಿಂದ ಮಾರ್ಚ್ 2021 ರವರೆಗೆ ನಮ್ಮ ಮಾಲ್‌ನಲ್ಲಿರುವಂತಹ ಎಲ್ಲಾ ಅಂಗಡಿಯವರಿಗೆ ಬಾಡಿಗೆ ಸಂಬಂಧಪಟ್ಟಂತೆ ರಿಯಾಯಿತಿ ಕೊಡಲಾಗಿತ್ತು ಎನ್ನುವ ಬಗ್ಗೆ ನಮೂದು ಇದೆ ಅಂದರೆ ಸರಿಯಲ್ಲ.

**(ಈ ಸಮಯದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ, ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷ್ಯವನ್ನು ಬೆರಳಚ್ಚು ಮಾಡಲಾಯಿತು)

(ಓ.ಹೇ.ಕೇ.ಸ)

84 ನೇ ಅ.ನ.ಸಿ ಮತ್ತು ಸತ್ರ ನ್ಯಾಯಾಧೀಶರು,
ಸಿ.ಸಿ.ಎಚ್–85, ಬೆಂಗಳೂರು.